ಆತಂಕ ವ್ಯಕ್ತಪಡಿಸುತ್ತಿದ್ದೀರಿ ಅದೆಲ್ಲಾ ದೂರವಾಗುತ್ತದೆ. ವಿದ್ಯುತ್ ಮಗ್ಗಗಳ ಅಭಿವೃದ್ಧಿ ಬಹಳಷ್ಟು ಸರಳವಾಗಿ ನಡೆಯುತ್ತದೆ ಎಂದು ಹೇಳುತ್ತೇನೆ.

ರಾಜ್ಯದಲ್ಲಿ ಇತ್ತೀಚೆಗೆ ಸಂಭವಿಸಿದ ಅತಿವೃಷ್ಟಿಯಿಂದ ಹಾನಿಗೀಡಾದ ಜಿಲ್ಲೆಗಳಿಗೆ ಕೇಂದ್ರದಿಂದ ನೆರವು ನೀಡಿರುವ ಬಗ್ಗೆ

180- ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಜಿರಾದ್): ಮಾನ್ಯ ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಇತ್ತೀಚೆಗೆ ರಾಜ್ಯದ ಯಾವ ಯಾವ ಜಿಲ್ಲೆಗಳು ಅತಿವೃಷ್ಟಿಗೆ ಒಳಗಾದವು?*

ಆ) *ಈ ಜಿಲ್ಲೆಗಳಲ್ಲಿ ಆದ ನಷ್ಟದ ಬಗ್ಗೆ ಹಾಗೂ ಪ್ರಾಣ ಹಾನಿಯ ಬಗ್ಗೆ ಪರಿಹಾರ ಧನವನ್ನು ವಿತರಣೆ ಮಾಡಲಾಗಿದೆಯೇ?*

ಇ) *ಮಾಡಿದ್ದಲ್ಲಿ ಎಷ್ಟು ಮೊತ್ತದ ಪರಿಹಾರವನ್ನು ಸರ್ಕಾರವು ಬಿಡುಗಡೆ ಮಾಡಿದೆ?*
(ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು)

ಈ) *ಇತ್ತೀಚೆಗೆ ಕೇಂದ್ರ ಸರ್ಕಾರದ ಉನ್ನತ ತಂಡವು ಈ ಪ್ರದೇಶಗಳಲ್ಲಿ ಅಧ್ಯಯನ ನಡೆಸಿ ಕೇಂದ್ರಕ್ಕೆ ವರದಿ ಸಲ್ಲಿಸಿರುವುದು ನಿಜವಲ್ಲವೇ?*

ಉ) *ಈ ತಂಡದ ವರದಿಯ ನಂತರ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಬಂದ ಪರಿಹಾರದ ಮೊತ್ತವೆಷ್ಟು?*

ಊ) *ರಾಜ್ಯ ಸರ್ಕಾರವು ಎಷ್ಟು ಮೊತ್ತವನ್ನು ಕೋರಿ ಕೇಂದ್ರಕ್ಕೆ ಮನವಿ ಸಲ್ಲಿಸಿತ್ತು?*

ಶ್ರೀ ಧರ್ಮಸಿಂಗ್ (ಕಂದಾಯ ಹಾಗೂ ಸಮಾಜ ಕಲ್ಯಾಣ ಸಚಿವರು) :

ಅ) ರಾಜ್ಯದ ಎಲ್ಲಾ 20 ಜಿಲ್ಲೆಗಳು.

ಆ) ಅತೀವೃಷ್ಟಿ ಮತ್ತು ನೆರೆಹಾವಳಿಯಿಂದ ಮೃತ ಹೊಂದಿದ ಎಲ್ಲಾ ಅರ್ಹ ಪ್ರಕರಣಗಳಲ್ಲಿ ಪರಿಹಾರ ನೀಡಲಾಗಿದೆ. ಮತ್ತು ಖಾಸಗಿ ಆಸ್ತಿ-ಪಾಸ್ತಿ ಕಳೆದುಕೊಂಡವರಿಗೆ ಪರಿಹಾರ ನೀಡುವ ಕಾರ್ಯ ಪ್ರಗತಿಯಲ್ಲಿದೆ.

ಇ) ಜಿಲ್ಲಾವಾರು ಬಿಡುಗಡೆ ಮಾಡಿದ ಹಣದ ವಿವರಗಳನ್ನು ಅನುಬಂಧ 'ಅ' ನಲ್ಲಿ ನೀಡಿದೆ.

ಈ) ಹೌದು

ಉ) ಇದುವರೆಗೂ ಯಾವುದೇ ಪರಿಹಾರದ ಮೊತ್ತ ಬಂದಿಲ್ಲ.

ಊ) ರಾಜ್ಯ ಸರ್ಕಾರವು ರೂ. 200.00 ಕೋಟಿಗಳ ಕೇಂದ್ರದ ಸಹಾಯವನ್ನು ಕೋರಿ ಮನವಿಯನ್ನು ಸಲ್ಲಿಸಿತ್ತು.

ಅನುಬಂಧ 'ಅ'

ನೆರೆ ಹಾವಳಿ ಪರಿಹಾರ ಕಾರ್ಯಗಳಿಗೆ ದಿನಾಂಕ 1.10.1993 ರಿಂದ 7.2.1994 ರ ವರೆಗೆ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಬಿಡುಗಡೆ ಮಾಡಿರುವ ಹಣದ ಜಿಲ್ಲಾವಾರು ವಿವರಗಳು

ಕ್ರ. ಸಂ.	ಜಿಲ್ಲೆಯ ಹೆಸರು	ನೆರೆಹಾವಳಿ ಪರಿಹಾರಕ್ಕೆ	ಬೆಳೆಹಾನಿಗೆ	ಸಾರ್ವಜನಿಕ ಆಸ್ತಿಪಾಸ್ತಿಗಳ ದುರಸ್ತಿ ಪುನರ್‌ರಚನೆಗೆ			ವೈದ್ಯೋಪಚಾರಕ್ಕೆ	ಒಟ್ಟು (ರೂ. ಲಕ್ಷಗಳಲ್ಲಿ)
				ಲೋಕೋಪಯೋಗಿ ಇಲಾಖೆಗೆ	ಸಣ್ಣ ನೀರಾವರಿ ಇಲಾಖೆಗೆ	ರಸ್ತೆಗಳ ದುರಸ್ತಿಗೆ		
1	2	3	4	5	6	7	8	9
1)	ಬಳ್ಳಾರಿ	165.00	50.00	10.00	-	-	3.00	228.00
2)	ಬೀದರ್	-	-	5.00	4.00	-	2.00	11.00
3)	ಗುಲ್ಬರ್ಗಾ	135.00	25.00	10.00	30.00	10.00	5.00	215.00
4)	ರಾಯಚೂರು	570.00	250.0	20.00	45.00	-	5.00	665.00
5)	ಬೆಳಗಾಂ	125.00	50.00	-	-	-	3.00	178.00
6)	ಬಿಜಾಪುರ	505.00	150-00	20.00	7.00	-	5.00	562.00
7)	ಧಾರವಾಡ	300.00	20.00	15.00	-	25.00	-	490.00
8)	ಉತ್ತರ ಕನ್ನಡ	3.00	17.50	-	-	15.00	-	35.50
9)	ಚಿಕ್ಕಮಗಳೂರು	10.00	-	10.00	-	15.00	-	35.00
10)	ದಕ್ಷಿಣ ಕನ್ನಡ	10.00	-	-	-	15.00	-	25.00
11)	ಹಾಸನ	25.00	-	-	11.00	25.00	-	61.00
12)	ಮೈಸೂರು	-	-	-	-	10.00	-	10.00
13)	ಮಂಡ್ಯ	-	-	-	-	10.00	-	10.00
14)	ಬೆಂಗಳೂರು (ನಗರ)	5.00	-	-	-	-	-	5.00
15)	ಬೆಂಗಳೂರು (ಗ್ರಾ)	10.00	-	-	5.00	-	-	15.00
16)	ಚಿತ್ರದುರ್ಗ	5.00	-	-	3.00	-	-	8.00
17)	ಕೋಲಾರ	2.25	-	-	-	-	-	2.25
18)	ಶಿವಮೊಗ್ಗ	25.00	-	5.00	15.00	15.00	-	60.00
19)	ತುಮಕೂರು	10.00	-	5.00	-	10.00-	-	25.00
	ಒಟ್ಟು	1905.25	342.50	100.00	120.00	150.00	23.00	2640.75

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೆ, ನೆರೆ ಹಾವಳಿಯಿಂದ ಎಲ್ಲ ಜಿಲ್ಲೆಗಳಿಗೂ ಲುಕ್ಸಾನಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಯಾವ ಯಾವ ಜಿಲ್ಲೆಗಳಲ್ಲಿ ಆಗಿದೆ ಎಂದರೆ 20 ಜಿಲ್ಲೆಗಳಲ್ಲಿ ಆಗಿದೆ ಎಂದು ಹೇಳಿದ್ದಾರೆ. ಇದರಲ್ಲಿ ನಷ್ಟದ ಬಗ್ಗೆ ಪ್ರಾಣ ಹಾನಿಯ ಬಗ್ಗೆ ಏನೇನು ಕ್ರಮತೆಗೆದುಕೊಂಡಿದ್ದೀರಿ ಎಂದರೆ "ಅತಿವೃಷ್ಟಿ ಮತ್ತು ನೆರೆಹಾವಳಿಯಿಂದ ಮೃತ ಹೊಂದಿದ ಎಲ್ಲಾ ಅರ್ಹ ಪ್ರಕರಣಗಳಲ್ಲಿ ಪರಿಹಾರ ನೀಡಲಾಗಿದೆ ಮತ್ತು ಖಾಸಗಿ ಆಸ್ತಿಪಾಸ್ತಿ ಕಳೆದುಕೊಂಡವರಿಗೆ ಪರಿಹಾರ ನೀಡುವ ಕಾರ್ಯ ಪ್ರಗತಿಯಲ್ಲಿದೆ" ಎಂದು ಹೇಳಿದ್ದಾರೆ. ಈ ಪ್ರಗತಿಯ ಗತಿ ಹೇಗಿದೆಯೆಂದು ನಾನು ಹೇಳುತ್ತಿದ್ದೇನೆ. ಕೆಲವು ಮನೆಗಳು ಪ್ರಗತಿಯಲ್ಲಿದೆ ಎಂದರೆ ಅದು ಯಾವ ಹಂತದಲ್ಲಿದೆ? ಎಲ್ಲಿಗೆ ಬಂದಿದೆ? ಅವರಿಗೆ ತಾವು ಏನಾದರೂ ಪರಿಹಾರವನ್ನು ಕೊಡುತ್ತಿದ್ದೀರಾ? ಈಗ ಕೆಲವು ಮನೆಗಳು ಅರ್ಧ ಬಿದ್ದುಹೋಗಿವೆ. ಈ ಮನೆಗಳನ್ನು ತಾವು ಪರಿಗಣಿಸುತ್ತಿಲ್ಲ. ತಮಗೇ ಗೊತ್ತಿದೆ, ಒಂದು ಮನೆ ಸ್ವಲ್ಪ ಸೀಳುಬಿಟ್ಟರೂ ಆ ಇಡೀ ಮನೆಯನ್ನೇ ಪೂರ್ಣವಾಗಿ ತೆಗೆದುಹಾಕಬೇಕಾಗುತ್ತದೆ. ಅವರಿಗೆ ನೀವು 100-200-300 ರೂಪಾಯಿಗಳನ್ನು ಕೊಟ್ಟರೆ ಅದರಿಂದ ಏನು ಲಾಭ? ನಮ್ಮ ಅಭಿಪ್ರಾಯದಲ್ಲಿ ಆ ಮನೆಗಳು ಸಂಪೂರ್ಣವಾಗಿ ಹೋದಂತೆಯೆ. ಇದರ ಬಗ್ಗೆ ತಾವು ಏನು ವಿಚಾರ ಮಾಡಿದ್ದೀರಿ?

ಇನ್ನು ಎರಡನೆಯದಾಗಿ, ತಾವು ಆದಾಯ ಮಿತಿಯನ್ನು ಹಾಕಿದ್ದೀರಿ. 50-60 ಸಾವಿರ ರೂಪಾಯಿ ಬೆಲೆಬಾಳುವ ಅವರ ಮನೆ ಹೋದರೆ ತಾವು 1400 ರೂಪಾಯಿಗಳನ್ನು ಕೊಡುತ್ತೀರಿ. ಆದುದರಿಂದ ತಾವು ಸರಿಯಾದ ಪರಿಹಾರವನ್ನು ಕೊಡುತ್ತಿಲ್ಲ. ಇದರ ಬಗ್ಗೆ ತಾವು ಏನು ಹೇಳುತ್ತೀರಿ? ಇನ್ನು ಆಸ್ತಿಪಾಸ್ತಿಗಳ ಬಗ್ಗೆ ಪ್ರಗತಿಯಲ್ಲಿದೆ ಎಂದು ತಾವು ಹೇಳುತ್ತಿದ್ದೀರಿ. ಅಲ್ಲಿ ನೋಡಿದರೆ 5 -10 ಲಕ್ಷ ರೂಪಾಯಿಗಳಷ್ಟು ಹಾನಿಯಾಗಿದೆ. ಇದಕ್ಕೆ ತಾವು ಕೊಡತಕ್ಕದ್ದು ಎಷ್ಟು? ತಾವು ಎಷ್ಟು ಹಣವನ್ನು ಗರಿಷ್ಟ ಕೊಡಬೇಕೆಂದು ತೀರ್ಮಾನ ಮಾಡಿಕೊಂಡಿದ್ದೀರೆಂಬುದನ್ನು ಹೇಳಬೇಕು.

ಇನ್ನೊಂದು ವಿಚಾರ ಎಂದರೆ, ಕೇಂದ್ರಸರ್ಕಾರಕ್ಕೆ ತಾವು ರಿಪೋರ್ಟ್ ಕಳುಹಿಸಿದ್ದೀರಾ? ಹಣ ಕೇಳಿದ್ದೀರಾ ಎಂದು ನಾನು ಕೇಳಿರುವುದಕ್ಕೆ "ಹೌದು ಎಂದು ತಾವು ಹೇಳಿದ್ದೀರಿ. ಎಷ್ಟು ಕೇಳಿದ್ದೀರಿ ಎಂದರೆ, ನಾವು 200 ಕೋಟಿ ರೂಪಾಯಿಗಳನ್ನು ಕೇಳಿದ್ದೇವೆಂದು ಹೇಳಿದ್ದೀರಿ. ಆದರೆ ಅವರು ಇದುವರೆಗೂ ಏನೂ ಹಣವನ್ನು ಕೊಟ್ಟಿಲ್ಲ. ತಾವು 2640 ಲಕ್ಷ ಹಣವನ್ನು ಕೊಟ್ಟಿದ್ದೀರಿ. ತಾವು ಕೊಟ್ಟಿರತಕ್ಕ ಅಂಕಿಅಂಶಗಳನ್ನು ನಾನು ಹೇಳುತ್ತಿದ್ದೇನೆ. ಆವತ್ತು ಅಷ್ಟು ಕೊಟ್ಟಿದ್ದೇವೆಂದು ಹೇಳುತ್ತಿದ್ದೀರಿ. ಅದರಲ್ಲಿ ಬೆಳೆ ಹಾನಿಯಾದುದಕ್ಕೆ ನಮ್ಮ ಬೀದರ್‌ಗಂತೂ ಏನೇನೂ ಇಲ್ಲ. ಮೊದಲೂ ಕೂಡ ಇದೇ ರೀತಿ ಆಗಿದೆ. ಈಗ ತಾವು ಕೊಟ್ಟಿರತಕ್ಕ ಹಣ ಅಷ್ಟೊಂದು ಸಮಂಜಸವಲ್ಲ.ಆದ್ದರಿಂದ ತಾವು ನಿರ್ದಿಷ್ಟವಾಗಿ ಯಾವುಯಾವುದಕ್ಕೆ ಎಷ್ಟೆಷ್ಟು ಎಂದು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ನಮ್ಮ ಕರ್ನಾಟಕ ರಾಜ್ಯದಲ್ಲಿ ಬಹಳ ಭೀಕರವಾದ ರೀತಿಯಲ್ಲಿ ನೆರೆಹಾವಳಿ ಆಗಿದೆ. ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿಯವರು ಮೊಟ್ಟಮೊದಲನೆಯದಾಗಿ ಈ ಸದನದಲ್ಲಿ ಇದನ್ನು ಪ್ರಸ್ತಾಪ ಮಾಡಿದ್ದಾರೆ. ಹಾಗೆ ಪ್ರಸ್ತಾಪ ಮಾಡುವಾಗ ಭಾಗಶಃ ಬಿದ್ದ ಮನೆಗಳಿಗೆ, ಪೂರ್ಣವಾಗಿ ಬಿದ್ದ ಮನೆಗಳಿಗೆ, ಬೆಳೆ ಏನು ನಷ್ಟವಾಗಿದೆ ಸಾರ್ವಜನಿಕ ಆಸ್ತಿಪಾಸ್ತಿ ಮತ್ತು ಬೇರೆ ಜನರ ಆಸ್ತಿಪಾಸ್ತಿ ಏನು ನಷ್ಟವಾಗಿದೆ. ಇದರ ಬಗ್ಗೆ ಸರ್ಕಾರದ ಕ್ರಮ ಏನು ಎಂದು ನಾನು ಕೇಳಿರುವುದಕ್ಕೆ "ಪ್ರಗತಿಯಲ್ಲಿದೆ" ಎಂಬುದು ಸರ್ಕಾರದ ಉತ್ತರವಾಗಿದೆ ಎಂದು ಹೇಳಿದ್ದಾರೆ. ನಾನಾದರೂ ಒಂದು ಮಾತನ್ನು ಹೇಳುತ್ತೇನೆ, ಇಂಥ ಭೀಕರ ಪರಿಸ್ಥಿತಿ ಬಂದಾಗ ಸರ್ಕಾರ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿದೆ.

ನಾವು ಎಷ್ಟೇ ವಿಶೇಷರೀತಿಯಲ್ಲಿ ತೀವ್ರ ಕಾರ್ಯಕ್ರಮಗಳನ್ನು ಪ್ರಾರಂಭ ಮಾಡಿದರೂ ಕೂಡ ಜನರ ಅಪೇಕ್ಷೆಯ ಮಟ್ಟಕ್ಕೆ ಮಾಡಲು ಸಾಧ್ಯವಾಗುವುದಿಲ್ಲ. ಏಕೆಂದರೆ ಬಹಳ ಗಂಭೀರ ಪರಿಸ್ಥಿತಿ ಆಗಿದೆ. ಇಂಥಾದ್ದು 1991ರಲ್ಲಿ, 1992ರಲ್ಲಿ ಹೀಗೆ ಪ್ರತಿವರ್ಷವೂ ಆಗುತ್ತಿದೆ. ಇತ್ತೀಚೆಗೆ ತಮಗೆ ಗೊತ್ತಿರುವಂತೆ ಭಾರೀ ಮಳೆ ಬಂತು; ಅನಂತರ ಭೂಕಂಪ ಕೂಡ ಆಯಿತು. ಸಾಮಾನ್ಯವಾಗಿ ಇದು ಎಲ್ಲ ಕಡೆಯಲ್ಲೂ ಆಗಿದೆ.

ಆದರೂ ಕೂಡ ಅಕ್ಟೋಬರ್ 1ನೇ ತಾರೀಖಿನಿಂದ ಇದುವರೆಗೆ ಏನಾಗಿದೆ ಎಂಬುದನ್ನು ನಾನು ಕಂಪೇರ್ ಮಾಡುತ್ತಿಲ್ಲ. ಮಾನ್ಯ ವಿಕಾಂತಯ್ಯನವರೂ ಕೂಡ ಇಲ್ಲಿದ್ದಾರೆ. ನಮ್ಮ ಕರ್ನಾಟಕ ರಾಜ್ಯದಲ್ಲೂ ಇಂಥ ಕೆಲಸಕಾರ್ಯಗಳಿಗೆ 26 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ; ಮತ್ತು ಏಪ್ರಿಲ್ 93ರಿಂದ ಇದುವರೆಗೆ 63 ಕೋಟಿ ರೂಪಾಯಿಗಳನ್ನು ನಾವು ಎಲ್ಲ ಕಡೆಗೂ ಕೊಟ್ಟಿದ್ದೇವೆ. ಅಷ್ಟೇ ಅಲ್ಲ, ಒಂದರೆಡು ತಿಂಗಳ ಹಿಂದೆ ಎಲ್ಲ ಜಿಲ್ಲಾಧಿಕಾರಿಗಳ ಜೊತೆಗೆ ಮೀಟಿಂಗ್ ಮಾಡಿ ಎಂದು ಆದೇಶ ಕೊಟ್ಟಿದೇವೆ. ಸ್ಥಳೀಯವಾಗಿ ಇರತಕ್ಕ ಜಿಲ್ಲಾ ಮುಖ್ಯಸ್ಥರು ಸ್ಥಳೀಯವಾಗಿ ಇರತಕ್ಕ ವಾಸ್ತವಿಕ ಸಮಸ್ಯೆಗಳನ್ನು ಪರಿಶೀಲಿಸಿ ಚೆನ್ನಾಗಿ ಕೆಲಸಮಾಡಬೇಕೆಂದು ಆದೇಶ ಕೊಟ್ಟಿದ್ದೇವೆ. ಪ್ರತಿಯೊಂದು ಜಿಲ್ಲೆಗೂ ನಾವು ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆಂಬ ಬಗ್ಗೆ ಒಂದು ಪಟ್ಟಿಯನ್ನೂ ಕೂಡ ತಮಗೆ ಕೊಟ್ಟಿದ್ದೇವೆ. ನಾನು ಈ ಕಂದಾಯ ಖಾತೆಯನ್ನು ವಹಿಸಿಕೊಂಡಮೇಲೆ ಕೇಂದ್ರ ಸರ್ಕಾರಕ್ಕೆ ಸುಮಾರು 247 ಕೋಟಿ ರೂಪಾಯಿಗಳಷ್ಟು ಆಸ್ತಿಪಾಸ್ತಿ, ರಸ್ತೆ, ಭಾಗಶಃ ಮತ್ತು ಪೂರ್ಣವಾಗಿ ಎಷ್ಟು ಮನೆಗಳು ಬಿದ್ದಿವೆ ಇದರ ಬಗ್ಗೆ ನಾನು ಸಮಗ್ರವಾದ ಒಂದು ವರದಿಯನ್ನು ಮಾನ್ಯ ಬಲರಾಮ ಜಾಖಡ್‌ರವರನ್ನು ಭೇಟಿ ಮಾಡಿ ಕೊಟ್ಟಿದ್ದೇವೆ. ಇದೇರೀತಿ ಕೇಂದ್ರದ ಅರ್ಥಮಂತ್ರಿಗಳಾದ ಮಾನ್ಯಮನಮೋಹನ್‌ಸಿಂಗ್‌ರವರನ್ನೂ ಭೇಟಿ ಮಾಡಿ ಕೊಟ್ಟು ಬಂದಿದ್ದೇನೆ. ಅವರು ಹೇಳಿದರು, ನ್ಯಾಚುರಲ್ ಕೆಲಾಮಿಟೀಸ್ ಫಂಡ್‌ನಲ್ಲಿ 27 ಕೋಟಿ ರೂಪಾಯಿ ಇದೆ. ಅದರಲ್ಲಿ ತಾವು ಖರ್ಚು ಮಾಡಬೇಕೆಂದು ಹೇಳಿದರು. ಇದರ ಜೊತೆಗೆ ಪದೇ ಪದೇ ಈ ರಾಜ್ಯಕ್ಕೆ ಇಂಥ ಪರಿಸ್ಥಿತಿ ಬರುತ್ತಿರುವುದರಿಂದ ವಿಶೇಷವಾದ ರೀತಿಯಲ್ಲಿ ನೆರವನ್ನು ನೀಡಬೇಕೆಂದು ನಾವು ಕೇಳಿಕೊಂಡಿದ್ದೇನೆ. ಅದನ್ನೂ ಕೂಡ ವಿಚಾರಮಾಡುತ್ತೇವೆಂದು ಹೇಳಿದ್ದಾರೆ. ಕಾರಣ ಅವರಲ್ಲೂ ಕೂಡ ರಿಪೋರ್ಟ್ಸ್ ಇವೆ. ಕರ್ನಾಟಕ ಮತ್ತಿತರ ಕೆಲವು ರಾಜ್ಯಗಳಲ್ಲಿ ಪದೇ ಪದೇ ಇಂಥಾದ್ದು ಆಗುತ್ತದೆಂದು ಅವರಿಗೂ ಗೊತ್ತಿದೆ. ಆ ಸಹಾಯವೂ ನಮಗೆ ಬರುತ್ತದೆ. ಭಾಗಶಃ ಬಿದ್ದ ಮನೆಗಳಿಗೆ, ಪೂರ್ತಿಯಾಗಿ ಬಿದ್ದ ಮನೆಗಳಿಗೆ, ನೆರೆಹಾವಳಿಯಲ್ಲಿ ತೊಂದರೆಗೆ ಒಳಗಾದವರಿಗೆ ಮೊದಲು 20 ಸಾವಿರ ರೂಪಾಯಿಗಳಂತೆ ಕೊಡುತ್ತಿದ್ದರು. ಮೊಟ್ಟಮೊದಲನೆಯದಾಗಿ ನಾವು ಅದನ್ನು ತಿದ್ದುಪಡಿ ಮಾಡಿ 20 ಸಾವಿರ ರೂಪಾಯಿಗಳಿಂದ 1 ಲಕ್ಷ ರೂಪಾಯಿಗಳಿಗೆ ಏರಿಸಿ ಅದರ ಪ್ರಕಾರ 67 ಜನರಿಗೆ ಕೊಟ್ಟಿದ್ದೇವೆ. ಇನ್ನೂ 10 ಜನರಿಗೆ ಕೊಡಬೇಕಾಗಿದೆ. ಕೆಲವನ್ನು ತನಿಖೆಮಾಡಿ ಕೊಡತಕ್ಕ ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ.

ಅಧ್ಯಕ್ಷರು : ನಿಯಮ 68ರ ಕೆಳಗೆ ಈ ವಿಚಾರವನ್ನು ಚರ್ಚೆಗೆ ನಾವು ತೆಗೆದುಕೊಳ್ಳುತ್ತಿದ್ದೇವೆ. ನೀವು ಉತ್ತರ ಹೇಳುವುದು ಬೇಡವೆಂದು ನಾನು ಹೇಳುತ್ತಿಲ್ಲ. ಆದರೆ ನಿಯಮ 68ರ ಕೆಳಗೆ ಚರ್ಚೆಗೆ ಅವಕಾಶ ಮಾಡಿಕೊಡುತ್ತಿದ್ದೇವೆ.

ಶ್ರೀ ಧರ್ಮಸಿಂಗ್ : ಮಾನ್ಯ ನಾಗಮಾರಪಲ್ಲಿಯವರು ಶಾಸಕರಾಗಿದ್ದಾರೆ. ಸಾರ್ವಜನಿಕರಿಗೆ ಆಗತಕ್ಕ ಕಷ್ಟನಷ್ಟ ಏನೆಂಬುದು ಅವರಿಗೆ ಚೆನ್ನಾಗಿ ಗೊತ್ತಿದೆ. ಆದರೂ ಕೂಡ ನಮ್ಮ ಸರ್ಕಾರ ಇದರ ಬಗ್ಗೆ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಅದರ ಬಗ್ಗೆ ತಮಗೆ ಶಂಕೆ ಬೇಡ.

ಶ್ರೀ ಹೆಚ್. ವಿಶ್ವನಾಥಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳಲ್ಲಿ ಎರಡು ಪ್ರಶ್ನೆಗಳನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯದಾಗಿ ನೆರೆ ಹಾವಳಿಯಿಂದ ಖಾಸಗಿಯಾಗಿ ಆಸ್ತಿಪಾಸ್ತಿಗಳನ್ನು ಕಳೆದುಕೊಂಡವರಿಗೆ ಪರಿಹಾರವನ್ನು ಕೊಡುತ್ತೇವೆಂದು ತಾವು ಹೇಳಿದಿರಿ. ಅದೇ ರೀತಿ ಮರಣ ಹೊಂದಿದವರ ಮನೆಯವರಿಗೂ ಕೊಟ್ಟಿದ್ದೇವೆಂದು ತಾವು ಹೇಳಿದಿರಿ. ಅದು ಇರಬಹುದು. ಖಾಸಗಿ ಆಸ್ತಿಪಾಸ್ತಿಗಳನ್ನು ಕಳೆದುಕೊಂಡವರಿಗೂ ಕೂಡ ತಾವು ಪೂರ್ಣವಾಗಿ ಪರಿಹಾರ ಕೊಡುವುದಕ್ಕೆ ಆಗಿಲ್ಲ.

ಇನ್ನೊಂದು ವಿಚಾರ ಎಂದರೆ, ಅನೇಕ ಸರ್ಕಾರದ ಆಸ್ತಿಪಾಸ್ತಿಗಳಾದಂಥ ಕೆರೆಗಳು ಒಡೆದು ಹೋಗಿವೆ. ಉದಾಹರಣೆಗೆ ಹೇಳುವುದಾದರೆ ನನ್ನ ಕ್ಷೇತ್ರದಲ್ಲಿ ಒಂದೂವರೆ ವರ್ಷದ ಹಿಂದೆ ಕಟ್ಟಿದಂಥ ಒಂದು ಕೆರೆ ಒಡೆದುಹೋಯಿತು. ಇದನ್ನು ರಿಪೇರಿ ಮಾಡಿಸುವ ಬಗ್ಗೆ ಇದುವರೆಗೂ ಯಾವುದೇ ಕ್ರಮವನ್ನೂ ತೆಗೆದುಕೊಂಡಿಲ್ಲ. ಆದ್ದರಿಂದ ನಾನು ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತಿದ್ದೇನೆ. ಎಲ್ಲೆಲ್ಲಿ ಈ ರೀತಿಯ ಕೆರೆಗಳು ಒಡೆದುಹೋಗಿವೆ ಅವುಗಳನ್ನು ಆದ್ಯತೆಯ ಆಧಾರದ ಮೇಲೆ ರಿಪೇರಿ ಮಾಡಿಸದಿದ್ದರೆ ಅಲ್ಲಿರತಕ್ಕ ರೈತರಿಗೆ ಅಷ್ಟೇ ಅಲ್ಲ, ದೇಶದ ಆಹಾರೋತ್ಪಾದನೆಗೂ ನಷ್ಟವಾಗುತ್ತದೆ. ಆದ್ದರಿಂದ ಎಲ್ಲೆಲ್ಲಿ ಕೆರೆಗಳು ಒಡೆದುಹೋಗಿವೆ ಅವುಗಳನ್ನು ಕನಿಷ್ಟಪಕ್ಷ ಈ ವರ್ಷವಾದರೂ ಆ ಕೆರೆಗಳ ದುರಸ್ತಿಯನ್ನು ಆಯವ್ಯಯದಲ್ಲಿ ಸೇರಿಸುವುದರ ಮೂಲಕ ಅವುಗಳನ್ನು ತೆಗೆದುಕೊಳ್ಳುವುದಕ್ಕೆ ಸೂಚನೆ ಕೊಡಬೇಕು. ಇದು ಸರ್ಕಾರಕ್ಕೆ ಸಾಧ್ಯವೆ?

ಇನ್ನು ಎರಡನೆಯದಾಗಿ, ಕೇಂದ್ರದಿಂದ 200 ಕೋಟಿ ರೂಪಾಯಿಗಳ ನೆರವನ್ನು ಕೇಳಿದ್ದೀರಿ. ಕೇಂದ್ರದ ಅಧ್ಯಯನ ತಂಡ ಈ ವರದಿಯನ್ನು ಕೊಟ್ಟಿದೆ ಎಂಬ ಮಾತನ್ನು ತಾವು ಹೇಳುತ್ತಿದ್ದೀರಿ. ನಾನು ತಮ್ಮಿಂದ ತಿಳಿಯಬಯಸುತ್ತೇನೆ, ಈ ವರದಿಯ ಸಾರಾಂಶ ಏನು? ಅವರು ನಮ್ಮ ರಾಜ್ಯಕ್ಕೆ ನೆರವು ಕೊಡಲು ಶಿಫಾರಸು ಮಾಡಿದ್ದಾರೆಯೇ? ಹಾಗೆ ಮಾಡಿದ್ದರೆ ಅದು ಯಾವ ಹಂತದಲ್ಲಿದೆ? ಎಷ್ಟು ನೆರವು ಸಿಕ್ಕೇಬಹುದೆಂದು ತಾವು ನಿರೀಕ್ಷ ಮಾಡುತ್ತೀರಿ? ಎಂಬುದನ್ನು ದಯವಿಟ್ಟು ತಿಳಿಸುತ್ತೀರಾ?

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ವಿಶ್ವನಾಥಯ್ಯನವರು ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ಹಾನಿಯಾಗಿರುವುದರ ಬಗ್ಗೆ ಪರಿಹಾರ ಕೊಡಲು ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ನಾನು ಈಗಾಗಲೇ ಚಿತ್ರದುರ್ಗ ಜಿಲ್ಲಾಧಿಕಾರಿಗಳ ಜೊತೆ ಸಂಪರ್ಕ ಮಾಡಿದ್ದೇನೆ. ಅವರಲ್ಲಿ 124 ಲಕ್ಷ ರೂಪಾಯಿ ಹಣ ಏನಿತ್ತು ಅದನ್ನು ಖರ್ಚು ಮಾಡಬೇಕೆಂದು ಆದೇಶ ಕೊಟ್ಟಿದ್ದೇವೆ. ಮತ್ತೇ ತಾವೇನು ವಿಚಾರವನ್ನು ಇವತ್ತು ಪ್ರಸ್ತಾಪ ಮಾಡಿದ್ದೀರಿ ಇದರ ಬಗ್ಗೆ ಕೂಡ ಜಿಲ್ಲಾಧಿಕಾರಿಯವರನ್ನು ಇವತ್ತೇ ಸಂಪರ್ಕ ಮಾಡುತ್ತೇವೆ. ಅಷ್ಟೇ ಅಲ್ಲ, ರಾಜ್ಯದ ಎಲ್ಲ ಜಿಲ್ಲಾಧಿಕಾರಿಗಳನ್ನೂ ಸಂಪರ್ಕ ಮಾಡಿ ಎಲ್ಲೆಲ್ಲಿ ಸೇತುವೆಗಳು ಒಡೆದುಹೋಗಿವೆ, ಸಂಪರ್ಕ ರಸ್ತೆಗಳು ಎಲ್ಲಿ ಹಾಳಾಗಿ ಹೋಗಿವೆ ಅವುಗಳ ಬಗ್ಗೆ ಕೂಡಲೇ ರಿಪೇರಿ ಕೆಲಸ ಕೈಗೊಳ್ಳಬೇಕೆಂದು ಹೇಳಿದ್ದೇವೆ. ಕೆರೆ ಒಡೆದುಹೋಗಿರುವ ಬಗ್ಗೆ ಗುಡ್ಡದ ತಳಗಡೆ ಇರತಕ್ಕ ಮನೆಗಳ ಬಗ್ಗೆ ನಾನು ಹೇಳಿದ್ದೇನೆ. ಕರ್ನಾಟಕ ಸರ್ಕಾರ ಕೇಂದ್ರ ಸರ್ಕಾರಕ್ಕೆ 201 ಕೋಟಿ ರೂಪಾಯಿಗಳ ಬೇಡಿಕೆಯ ವರದಿ ಏನು ಸಲ್ಲಿಸಿದೆ ಅದರ ಸಾರಾಂಶ ಏನಾಗಿದೆ ಎಂಬುದನ್ನು ಕೇಳಿದ್ದೀರಿ. ಮಾನ್ಯ ಬಲರಾಂ ಜಾಖಡ್‌ರವರು ಬೆಂಗಳೂರಿಗೆ ಬಂದಿದ್ದಾರೆ ಇದರ ಬಗ್ಗೆ ಏನಾಗಿದೆ ಎಂಬುದನ್ನು ಹೇಳಿದ್ದಾರೆ. ಇದರ ಬಗ್ಗೆ ತೀವ್ರ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಗಳೂ ಮತ್ತು ನಾನೂ ಅವರ ಜೊತೆ ಚರ್ಚೆಮಾಡಿದ್ದೇವೆ. ಮತ್ತೊಮ್ಮೆ ನಾವು ಹೋಗಿ ಇದನ್ನು ಒತ್ತಾಯಮಾಡುತ್ತೇವೆಂದು ಆಶ್ವಾಸನೆ ಕೊಡುತ್ತೇವೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೆ.....

ಅಧ್ಯಕ್ಷರು : ಮೂರು ಪ್ರಶ್ನೆಗಳನ್ನು ಕೇಳಿದ್ದೀರಿ.

ಶ್ರೀ ಗುರುಪಾದಪ್ಪ ನಾಗರಮಾರಪಲ್ಲಿ : ಪ್ರಶ್ನೆ ನನ್ನದು. ನಾನು ಎರಡನೇ ಸಾರಿ ಕೇಳುವುದು ಬೇಡವೇ?

ಶ್ರೀ ಜಿ. ಪುಟ್ಟಸ್ವಾಮಿಗೌಡ : ಇದು ಬಹಳ ಪ್ರಾಮುಖ್ಯವಾದ ಪ್ರಶ್ನೆ ಎಂದು ಮಾನ್ಯ ಅಧ್ಯಕ್ಷರು ಸ್ವಯಂಪ್ರೇರಿತರಾಗಿ ಅರ್ಧ ಗಂಟೆ ಚರ್ಚೆಗೆ ಅವಕಶ ಕೊಟ್ಟಿದ್ದಾರೆ. ನೀವು ಮತ್ತೆ ಅದನ್ನೇ ಕೇಳುವುದಾದರೆ ನಮ್ಮ ಪ್ರಶ್ನೆಗೆ ಕಾಯ್ದುಕೊಂಡು ಕುಳಿತಿದ್ದೇವೆ. ನಮ್ಮ ಪ್ರಶ್ನೆ ಕೇಳುವುದು ಬೇಡವೆ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಇದು ಮಹತ್ವದ ಪ್ರಶ್ನೆ ಅಲ್ಲವೆಂದು ಹೇಳುವುದಾದರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ. ಆ ರೀತಿ ತಾವು ಪರಿಗಣಿಸುವುದಾದರೆ ಬಹಳ ಸಂತೋಷ.

ಅಧ್ಯಕ್ಷರು : ಕೇಳಿ, ಕೇಳಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಇತ್ತೀಚೆಗೆ ಕೇಂದ್ರ ಸರ್ಕಾರದ ಉನ್ನತ ತಂಡವು ಈ ಪ್ರದೇಶದಲ್ಲಿ ಅಧ್ಯಯನ ನಡೆಸಿ ಕೇಂದ್ರಕ್ಕೆ ವರದಿ ಸಲ್ಲಿಸಿರುವುದು ನಿಜವೇ ಅಂದರೆ "ಹೌದು" ಅಂದಿದ್ದೀರಿ. ಅವರು ಎಷ್ಟು ದುಡ್ಡು ಬೇಕು ಎಂದು ವರದಿ ಕೊಟ್ಟಿದ್ದಾರೆ. ಎಷ್ಟು ಹಣಬೇಕೆಂಬ ಬಗ್ಗೆ ವರದಿ ಕೊಟ್ಟಿದ್ದಾರೆ, ಅದರ ಬಗ್ಗೆ ತಮ್ಮ ಹತ್ತಿರ ಮಾಹಿತಿ ಇದೆಯೇ? ಹಣ ಎಷ್ಟು ಎಂದು ಹೇಳಲಿಲ್ಲ. ವರದಿ ಸಲ್ಲಿಸಿದ್ದಾರೆ. ಎಷ್ಟು ಹಣ ಲುಕ್ಸಾನಾಗಿದೆ, ಸರ್ಕಾರದ ಆಸ್ತಿಪಾಸ್ತಿಗಳು, ಖಾಸಗಿ ಆಸ್ತಿಪಾಸ್ತಿಗಳು ಸತ್ತಿರತಕ್ಕವರು ಇಷ್ಟು, ಮನೆಗಳು ಬಿದ್ದವು ಇಷ್ಟು ಎಂದು ಹಾಗೂ ಬೆಳೆ ಹಾನಿ ಬಗ್ಗೆ ಹೇಳಿದ್ದಾರೆಯೇ? ಈ ಅಧ್ಯಯನದ ವರದಿಯಲ್ಲಿ ಎಷ್ಟು ಹಣ ಬೇಕು ಎಂದು ಕೇಳಿರುವುದರ ಬಗ್ಗೆ ನಿರ್ದಿಷ್ಟವಾದ ಅಂಕಿ ಅಂಶ ತಮ್ಮಲ್ಲಿ ಇದೆಯೇ? ದಯವಿಟ್ಟು ಅಂಕಿಅಂಶ ಹೇಳುತ್ತೀರಾ?

ಶ್ರೀ ಧರ್ಮಸಿಂಗ್ : ಈಗಾಗಲೇ ವಿಕಾಂತಯ್ಯನವರು ಈ ಪ್ರಶ್ನೆ ಕೇಳಿದ್ದಾರೆ. 201 ಕೋಟಿ ರೂಪಾಯಿಗಳಿಗೆ ಸಂಬಂಧಪಟ್ಟ ಹಾಗೆ ಕೇಂದ್ರಕ್ಕೆ ಏನು ವರದಿ ಸಲ್ಲಿಸಿದ್ದೇವೆ ಅದರ ಹಿನ್ನೆಲೆಯಲ್ಲಿ ಅಧ್ಯಯನ ತಂಡವನ್ನು ಕರ್ನಾಟಕಕ್ಕೆ ಕಳುಹಿಸಿದ್ದಾರೆ. ತಂಡದವರು ಎಲ್ಲ ಕಡೆ ನೋಡಿ ಬಂದಿದ್ದಾರೆ. ನಮ್ಮ ಜೊತೆ ಕೂಡ ಮಾತನಾಡಿದ್ದಾರೆ. ಮುಖ್ಯಕಾರ್ಯದರ್ಶಿಯವರ ಜೊತೆ ಮಾತನಾಡಿದ್ದಾರೆ. ಅಧಿಕಾರಿಗಳ ಜೊತೆ ಸಮಾಲೋಚನೆ ಮಾಡಿ ತಮ್ಮ ವರದಿಯನ್ನು ಕೇಂದ್ರಕ್ಕೆ ಕೊಟ್ಟಿದ್ದಾರೆ. ಅವರು ಕೂಡ ಕನ್ವಿನ್ಸ್ ಆಗಿದ್ದಾರೆ. ಅವರು ನಮಗೆ ಅಂಕಿಅಂಶ ಕೊಟ್ಟಿಲ್ಲ. ಕೇಂದ್ರಕ್ಕೆ ವರದಿಯನ್ನು ಸಲ್ಲಿಸಿದ್ದಾರೆ.

ರೇಷ್ಮೆ ಆಮದು ಕುರಿತು

151 -ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) : ಮಾನ್ಯ ರೇಷ್ಮೆ ಖಾತೇ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೇಷ್ಮೆ ಆಮದನ್ನು ಮಾಡಿಕೊಳ್ಳುತ್ತಿರುವುದರಿಂದ ರೇಷ್ಮೆ ಬೆಳೆಗಾರರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ರೇಷ್ಮೆ ಆಮದನ್ನು ನಿಲ್ಲಿಸಲು ಸರ್ಕಾರ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದೆಯೇ?

ಇ) ಹಾಗಿದ್ದಲ್ಲಿ ಯಾವಾಗ ಮನವಿಯನ್ನು ಸಲ್ಲಿಸಲಾಗಿದೆ?

ಡಾ. ಜಿ. ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು):